ಶ್ರೀ ವೀರೇಂದ್ರ ಪಾಟೀಲ್.—ಒಮ್ಮೆ ಲಫ್ಟ್ ಇರಿಗೇಷನ್ನಿಗೆ ಅವಕಾಶ ಕೊಟ್ಟಮೇಲೆ ಯಾವಾಗ ನೀರನ್ನು ಪಯೋಗಿಸುತ್ತಾರೆಂದು ಕಾಯುವುದಕ್ಕಾಗುವುಲ್ಲ. ಅನುಕೂಲವಾಗಬೇಕೆಂದು ಹೇಳುವಾಗ ಎಲ್ಲಾ ಹೇಳುವುದುಂಟು. ಒಮ್ಮೆ ಪಂಪುಸೆಟ್ಟು ಬಂದಮೇಲೆ, ವಿದ್ಯುಚ್ಛಕ್ತಿ ದೊರೆತ ಮೇಲೆ ಯಾವಾಗ ಬೇಕಾದರೂ ನೀರನ್ನು ತೆಗೆದುಕೊಳ್ಳಬಹುದು; ಕಾಯುವ ದಕ್ಕಾಗುವುದಿಲ್ಲ.

2-00 P.M.

ಶ್ರೀ ಎನ್. ಜಿ. ಹಾಲಪ್ಪ.—ಭದ್ರಾನಲ್ಲೂ ಕೂಡ ಈ ರೀತಿ ಮಾಡುವುದಕ್ಕೆ ಅವಕಾಶ ಮಾಡುತ್ತೀರಾ?

ಶ್ರೀ ವೀರೇಂದ್ರ ಪಾಟೀಲ್.—ಆಗಲೇ ಹೇಳಿದೆ, ಎಲ್ಲೆಲ್ಲಿ ಕೆನಾಲ್‌ನಲ್ಲಿ ಸಾಕಾಗುವಷ್ಟು ಕ್ಯಾಪ್ಯಾಸಿಟಿ ಇದೆ ಕಮ್ಯಾಂಡ್ ಏರಿಯಾದವರಿಗೆ ಹೇಚ್ಚಾಗಿ ನೀರು ಹರಿಯುತ್ತಾ ಇದೆ, ವೇಸ್ಟ್ ಆಗುತ್ತಾ ಇದೆ ಎಂಬ ಪರಿಸ್ಥಿತಿಯಲ್ಲಿ ಮಾತ್ರ ವಿಚಾರ ಮಾಡಬಹುದೇ ಹೊರತು ಸರ್ವೆಸಾಧಾರಣವಾಗಿ ಕೆನಾಲ್‌ನಿಂದ ಲಫ್ಟ್ ಇರಿಗೇಷನ್‌ಗೆ ಅವಕಾಶ ಕೊಡುವುದಿಲ್ಲ.

Sri H. SIDDAVEERAPPA.—Has it not come to the notice of Government that under Mari Kanive this scheme was tried and it was found to be to the detriment of the tail enders and so there is agitation that this must be discontinued ?

Sri VEERENDRA PATIL.—This is what the hon. Member Sri N. G. Halappa has said in his letter. We have made it clear that we had very bitter experience in Vani Vilas Sagar.

ಶ್ರೀ ಎಂ. ನಾಗಪ್ಪ.—ಈ ಮನೆಯಲ್ಲಿ ಒಂದು ಹೇಳಿಕೆ, ಕೊಟ್ಟದ್ದು ತಮ್ಮ ಗಮನಕ್ಕೆ ಬಂದಿರಬಹುದು. ನಾವು ಇನ್ನು ಮುಂದೆ ಈ ಕೆನಾಲ್‌ಗಳಿಂದ ಲಫ್ಟ್ ಇರಿಗೇಷನ್‌ಗೆ ನೀರು ಕೊಡುವುದಕ್ಕೆ ಸಾಧ್ಯವಿಲ್ಲ, ಕೆಲವು ಕಡೆ ಕಳುವಿನಿಂದ ಉಪಯೋಗವಾಗುತ್ತಾ ಇದೆ ಎಂಬ ಅಭಿಪ್ರಾಯವಿದೆ ಎಂದು ಹೇಳಿದಿರಿ. ಆ ಅಭಿಪ್ರಾಯವನ್ನು ಏನಾದರೂ ಬದಲಾವಣೆ ಮಾಡಿದ್ದೀರಾ? ಅಥವಾ ಅದನ್ನೇ ಮುಂದುವರಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಆವತ್ತಿನ ಥೋರಣೆ ಏನಿತ್ತೋ ಅದೇ ರೀತಿಯಿಂದ ಇವತ್ತೂ ಕೂಡ ಇದೆ. ಎಲ್ಲೆಲ್ಲಿ ಇಂಜನಿಯರು ಸರ್‌ಪ್ಲಸ್ ವಾಟರ್ ಹರಿಯುತ್ತಾ ಇದೆ, ಕೊಟ್ಟರೆ ಅನಾನು ಕೂಲವಾಗುವುದಿಲ್ಲ ಎಂದು ಹೇಳುತ್ತಾರೆ ಅದರ ಬಗ್ಗೆ ಪರಿಶೀಲನೆ ಮಾಡುತ್ತೇವೆ.

Exhibition of Wall-Posters Containing Slogans of Mao

272. Sri VATAL NAGARAJ (Chickpet):—

Will the Chief Minister be plased to state :—

(*a*) whether the report regarding the exhibition of Wall-posters containing the slogans of Mao in the City published in the news paper of July 13th has come to the notice of the Government ;

(*b*) the steps taken by them in this behalf ?

Sri VEERENDRA PATIL (Chief Minister).—

(*a*) The exhibition of the said posters in the City has come to the notice of Government.

(*b*) Suitable action has been taken as per law.

ಶ್ರೀ ವಾಟಾಳ್ ನಾಗರಾಜ್.—ನೂಕ್ಕಕ್ರಮ ಕೈಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ಅಂಟಿಸಿದವರು ಯಾರು ? ಯಾರ್ಯಾರಮೇಲೆ ಕ್ರಮ ಕೈಕೊಂಡಿದ್ದೀರಿ ? ಏನು ಕ್ರಮ ಕೈಕೊಂಡಿದ್ದೀರಿ ಎಂಬುದನ್ನು ಈ ಸಭೆಗೆ ತಿಳಿಸುತ್ತೀರಾ ?

† ಶ್ರೀ ವೀರೇಂದ್ರ ಪಾಟೀಲ್.—ಕೆಲವು ಜನ ಇದನ್ನು ಮಾಡಿದ್ದಾರೆ ಕಾನೂನು ಪ್ರಕಾರ ಅವರಮೇಲೆ ಖಟ್ಲೆಲೆ ಹಾಕಿದ್ದೇವೆ ಮತ್ತು ಅವರಿಗೆ ಕೋರ್ಟಿನಲ್ಲಿ ಶಿಕ್ಷೆ ಕೂಡ ಆಗಿದೆ.

Sri B. P. GANGADHAR.—May I know whether they were anti-national slogans, what was the number of persons who were apprehended for pasting the posters and whether they are the residents of Bangalore or other area and what was the term for which they were imprisoned ?

Sri VEERENDRA PATIL.—In all 5 people were involved in this. They were prosecuted and the court convicted them and sentenced them to pay fines ranging from Rs. 3 to 10. So far as the slogans are concerned, they were mostly Mao's slogans saying that political power grows out of the barrel of a gun. They had written this and pasted on the walls.

ಶ್ರೀ ಬೋಳ ರಘುರಾಮ ಶೆಟ್ಟಿ.—ಈ ರೀತಿ ವಾಲ್ ಪೋಸ್ಟರ್ಸ್ ಹಚ್ಚುವುದಕ್ಕೆ ಯಾವುದಾದರೂ ರಾಜಕೀಯ ಪಕ್ಷಗಳವರು ಪ್ರೋತ್ಸಾಹ ಕೊಟ್ಟಿದ್ದಾರೆ ? ಆ ರೀತಿ ಪ್ರೋತ್ಸಾಹ ಕೊಟ್ಟಿದ್ದರೆ ಅಂತಹ ರಾಜಕೀಯಪಕ್ಷದ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಕ್ಸಲೈಟ್ಸ್ ಅಂತ ಹೆಸರು ಇದೆ. ಇವರು ಅಲ್ಲಲ್ಲೇ ಇರುತ್ತಾರೆ. 4—5 ಜನ ಇದನ್ನು ಮಾಡಿರುತ್ತಾರೆ. ಅವರೆಲ್ಲರೂ ಕೇರಳದಿಂದ ಬಂದವರು, ಇಂತಹವರು ಅಲ್ಲಲ್ಲೇ ಮುಖ ತಪ್ಪಿಸಿ ರಾತ್ರಿ ಹೊತ್ತು ಪೋಸ್ಟರ್ಸ್ ಹಚ್ಚುತ್ತಾರೆ.

Sri D. B. KALAMNKAR.—Under what Section were they prosecuted ?

Sri VEERENDRA PATIL.—Under Section 92 of the Mysore Police Act, 1963.

Sri B. B. SAYANAK.—May I know whether the posters containing these slogans of Mao were pasted by Sri Vatal Nagaraj and his Kannada Chaluvaligars ?

(No reply)

ಶ್ರೀ ಎ. ಎನ್. ಪಾಟೀಲ್.—ಇದನ್ನು ಪ್ರಚೋದನೆ ಮಾಡತಕ್ಕ ಪೊಲಿಟಿಕಲ್ ಲೀಡರ್ಸ್‌ನ್ನು ವೀಡ್‌ಔಟ್ ಮಾಡಬೇಕೆಂದು ಅನ್ನುತ್ತಿರಾ ? ಈ ಸ್ಲೋಗನ್‌ಗಳನ್ನು ಎಕ್ಸ್‌ಪೋಸ್ ಮಾಡುವಾರದು ಎಂದು ಅನ್ನುತ್ತೀರಾ ? ಅಥವಾ ಬರೀ ರಾ ಅಂಡ್ ಅರ್ಡರ್ ಮೇನ್‌ಟೇನ್ ಮಾಡುವಷ್ಟಕ್ಕೆ ಮಾತ್ರ ಕಾರ್ಯಕ್ರಮ ತೆಗೆದುಕೊಂಡಿದ್ದೀರ ಎಂದು ಕೇಳುತ್ತೇನೆ.

ಶ್ರೀ ವೀರೇಂದ್ರ ಪಾಟೀಲ್.—ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಿದ್ದೇವೆ. ಅದನ್ನು ಹೇಳಿದ್ದೇನೆ. ಸ್ಲೋಗನ್‌ಗಳಿರತಕ್ಕ ಪೋಸ್ಟರ್‌ಗಳನ್ನು ಹಚ್ಚಿ ಜನರನ್ನು ಒಂದು ರೀತಿಯಿಂದ ಪ್ರಚೋದನೆ ಮಾಡಿ ಅಶಾಂತಿಯನ್ನುಂಟುಮಾಡುವುದಕ್ಕೆ ಯಾರು ಪ್ರಯತ್ನ ಮಾಡುತ್ತಾರೆ ಅವರೆಲ್ಲರೂ ಶಿಕ್ಷೆಗೆ ಗುರಿಯಾಗುತ್ತಾರೆ.

ಶ್ರೀ ಎಸ್. ಕೆ. ಅಮಿನ್.—ದಕ್ಷಿಣ ಕನ್ನಡ ಜಿಲ್ಲೆಯ ಉರ್ವಾಲ್ಲ ಮತ್ತು ಉಜ್ರೆ ಎಂಬ ಕಡೆಯಲ್ಲಿ ಇಂತಹ ಚಟುವಟಿಕೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ವೀರೇಂದ್ರ ಪಾಟೀಲ್.—ಅಲ್ಲೂ ಕೂಡ ಈ ಪ್ರಕಾರ ಮೇ 1968ರಲ್ಲಿ ಆಗಿದೆ. ಯಾರು ಮಾಡಿದ್ದಾರೆ ಎಂಬುದನ್ನು ಪತ್ತೆಹಚ್ಚಿರಾಗಿಲ್ಲ.

ಶ್ರೀ ಎಂ. ನಾಗಪ್ಪ.—ನಕ್ಸೆಲೈಟ್ಸ್ ಮಾಡಿರಬೇಕು ಎಂಬ ಊಹೆ ಸರ್ಕಾರಕ್ಕೆ ಬಂದಮೇಲೆ ನಮ್ಮ ರಾಜ್ಯದಿಂದ ಅವರನ್ನು ಬೇರೆ ಕಡೆಗೆ ಕಳುಹಿಸುವುದಕ್ಕೆ ಕಾರ್ಯಕ್ರಮ ಕೈಕೊಳ್ಳುತ್ತದೆಯೇ? ಹಾಗಿದ್ದರೆ ಈ ಸಂದರ್ಭದಲ್ಲಿ ಯಾವ ತರಹದ ಕ್ರಮ ಕೈಕೊಂಡಿದೆ ಎಂಬುದನ್ನು ತಾವು ದಯಮಾಡಿ ತಿಳಿಸಬೇಕು.

ಶ್ರೀ ವೀರೇಂದ್ರ ಪಾಟೀಲ್.—ಅವರು ಆರ್ಗನೈಸ್ಡ್ ಆಗಿ ಮಾಡುತ್ತಿಲ್ಲ, ಅಲ್ಲಲ್ಲಿ ಸೇರಿಕೊಂಡು ಕೆಲವು ಜನ ರಾತ್ರಿ ಹೊತ್ತು ಇಂತಹ ಪೋಸ್ಟರ್ಸ್‌ನ್ನು ಹಚ್ಚುತ್ತಾರೆ. ನಕ್ಸೆಲೈಟ್ಸ್ ನಮ್ಮಸ್ಯೆ ಹೆಚ್ಚಿನದಾದ ಪ್ರಮಾಣದಲ್ಲಿ ನಮ್ಮ ಸಂಸ್ಥಾದಲ್ಲಿ ಇಲ್ಲ. ರಾತ್ರಿ ಹೊತ್ತು ಇಂತಹ ವಾಲ್ ಪೋಸ್ಟರ್ಸ್‌ನ್ನು ಹಚ್ಚುತ್ತಾ ಇದ್ದಾಗ 4—5 ಜನ ಸಿಕ್ಕಿಬಿದ್ದರು ಅವರಮೇಲೆ ಕ್ರಮ ತೆಗೆದು ಕೊಂಡಿದ್ದೇವೆ.

ಶ್ರೀ ಎನ್. ಎ. ಚನ್ನೇಗೌಡ.—ಈಗ ಶಿಕ್ಷೆಗೆ ಗುರಿಯಾಗಿರತಕ್ಕವರು ಚೈನೀಸ್ ಎಂಬೆಸಿಯಿಂದ ಹಣ ಪಡೆಯುತ್ತಾ ಇದ್ದರು ಎಂಬುದು ಗೊತ್ತೆ?

ಶ್ರೀ ವೀರೇಂದ್ರ ಪಾಟೀಲ್.—ಅಷ್ಟೆಲ್ಲಾ ವಿವರ ಇಲ್ಲ.

ಶ್ರೀ ಎನ್. ಲೋಕಯ್ಯನಾಯಕ್.—ಈ ಪೋಸ್ಟರುಗಳು ನಮ್ಮ ದೇಶದಲ್ಲಿ ತಯಾರಾದದ್ದೆ ಅಥವಾ ಚೈನಾ, ರಷ್ಯಾ ದೇಶದಿಂದ ಬಂದದ್ದೆ?

ಶ್ರೀ ವೀರೇಂದ್ರ ಪಾಟೀಲ್.—ಈ ಪೋಸ್ಟರುಗಳು ಪ್ರಿಂಟ್ ಮಾಡಿದವಲ್ಲ, ಕೈಯಲ್ಲಿ ಬರೆದವು. ಚೈನಾದಿಂದ ಬಂದದ್ದು ಅಂತ ಹೇಳಲಕ್ಕೆ ಆಗುವುದಿಲ್ಲ.

Allotment of Boats under Agricultural Refinance Corporation Scheme

281. Sri RATNAKUMAR KATTEMAR (Mudabidre).—

Will the Minister of State for Ports and Fisheries be pleased to State :—

(*a*) when was the Agricultural Refinance Corporation scheme introduced ;

(*b*) (i) the rules prescribed for the grant of financial aid, such as subsidy to the fishermen for obtaining mechanised boats, and

(ii) the total amount utilised since the scheme was introduced in South Kanara District ;

(*c*) the number of boats that have been allotted to the South Kanara District since the scheme was introduced by the Government as well as by the Fish Marketing Federation in Mangalore ;

(*d*) the action taken on the representation made to the Director of Fisheries and to the Chairman of the Federation in Mangalore and to the Minister concerned for allotment of Mechanised boats to certain persons of Mangalore Taluk ?

Sri H. C. LINGA REDDY (Minister of State for Ports and Fisheries).

(*a*) 1-10-1966.